ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**ಸಂಕೇತ ಸಂಖ್ಯೆ : 97-K**
**Code No. : 97-K**

# D

**CCE PR**
**Revised & Unrevised**

Question Paper Serial No. **81**

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**( ಕನ್ನಡ ಭಾಷಾಂತರ / Kannada Version )**

**( ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater )**

ದಿನಾಂಕ : 28. 09. 2020 ] [ Date : 28. 09. 2020

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ಭಾರತದ ಸಂವಿಧಾನ ರಚನಾ ಸಭೆಯ ಖಾಯಂ ಅಧ್ಯಕ್ಷರು

   (A) ಡಾ. ಬಾಬು ರಾಜೇಂದ್ರ ಪ್ರಸಾದ್

   (B) ಡಾ. ಬಿ.ಆರ್. ಅಂಬೇಡ್ಕರ್

   (C) ಮಹಾತ್ಮ ಗಾಂಧಿ

   (D) ಬಾಲಗಂಗಾಧರ್ ತಿಲಕ್

2. ಭಾರತ ಸಂವಿಧಾನದ ಪ್ರಸ್ತಾವನೆಯಲ್ಲಿ 'ಐಕ್ಯತೆ' ಎಂಬ ಪದವನ್ನು ಸೇರಿಸಿದ ತಿದ್ದುಪಡಿ

   (A) 43ನೇ ತಿದ್ದುಪಡಿ

   (B) 42ನೇ ತಿದ್ದುಪಡಿ

   (C) 40ನೇ ತಿದ್ದುಪಡಿ

   (D) 52ನೇ ತಿದ್ದುಪಡಿ

3. ಅಧಿಕಾರ ಲೇಖದ ಮುಖ್ಯ ಗುರಿ

   (A) ಅಕ್ರಮವಾಗಿ ಸಾರ್ವಜನಿಕ ಹುದ್ದೆಗಳನ್ನು ಆಕ್ರಮಿಸುವುದನ್ನು ತಡೆಯುವುದು

   (B) ಅಕ್ರಮವಾಗಿ ಸಾರ್ವಜನಿಕ ಆಸ್ತಿ ಕಬಳಿಸುವುದನ್ನು ತಡೆಯುವುದು

   (C) ಸಾರ್ವಜನಿಕ ಹಣಕಾಸಿನ ದುರ್ಬಳಕೆ ತಡೆಯುವುದು

   (D) ಅಕ್ರಮ ವಲಸೆಯನ್ನು ತಡೆಯುವುದು

4. "ರಾಜ್ಯನೀತಿ ನಿರ್ದೇಶಕ ತತ್ವಗಳು ಸಂವಿಧಾನದ ಅಂತರಾತ್ಮವಾಗಿವೆ" ಎಂದು ಹೇಳಿದವರು

   (A) ಕೆ.ಸಿ. ಮರ್ಕಾಂದನ್

   (B) ಗ್ರಾನ್‌ವಿಲ್ಲೆ ಆಸ್ಟಿನ್

   (C) ಮಹಾತ್ಮ ಗಾಂಧೀಜಿ

   (D) ಪ್ಲೇಟೋ

5. ನಮ್ಮ ಸಂವಿಧಾನದ 52ನೇ ವಿಧಿಗೆ ಸಂಬಂಧಿಸಿರುವುದು

(A) ಪ್ರಧಾನ ಮಂತ್ರಿ ನೇಮಕ

(B) ಮುಖ್ಯಮಂತ್ರಿ ನೇಮಕ

(C) ರಾಷ್ಟ್ರಪತಿ ನೇಮಕ

(D) ಮುಖ್ಯ ನ್ಯಾಯಾಧೀಶರ ನೇಮಕ

6. ಕೆನಡಾದ ಕೆಳಮನೆಯ ಹೆಸರು

(A) ಪ್ರತಿನಿಧಿಗಳ ಸದನ

(B) ಸಾಮಾನ್ಯರ ಸದನ

(C) ಫೆಡರಲ್ ಅಸೆಂಬ್ಲಿ

(D) ಲೋಕಸಭೆ

7. ರಾಜ್ಯ ವಿಧಾನ ಮಂಡಲ ಅಧಿವೇಶನವಿಲ್ಲದಿರುವಾಗ ಸುಗ್ರೀವಾಜ್ಞೆ ಹೊರಡಿಸುವವರು

(A) ರಾಜ್ಯಪಾಲರು

(B) ಮುಖ್ಯಮಂತ್ರಿ

(C) ಮುಖ್ಯ ನ್ಯಾಯಾಧೀಶರು

(D) ಪ್ರಧಾನ ಮಂತ್ರಿ

8. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಬೇಕಾಗಿರುವ ಅರ್ಹತೆ

(A) 5 ವರ್ಷಗಳ ಕಾಲ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರಬೇಕು

(B) 5 ವರ್ಷಗಳ ಕಾಲ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರಾಗಿರಬೇಕು

(C) ಪ್ರಧಾನ ಮಂತ್ರಿಯವರ ದೃಷ್ಟಿಯಲ್ಲಿ ಕಾನೂನು ತಜ್ಞರಾಗಿರಬೇಕು

(D) ಸೆಶನ್ ನ್ಯಾಯಾಲಯದಲ್ಲಿ 5 ವರ್ಷಗಳ ಕಾಲ ನ್ಯಾಯಾಧೀಶರಾಗಿರಬೇಕು

9. ಒಂದು ರಾಜ್ಯದ ವಿಧಾನಸಭೆಯ ಒಟ್ಟು ಸದಸ್ಯರ ಸಂಖ್ಯೆ 300 ಆಗಿದ್ದರೆ ಆ ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ

(A) 50

(B) 100

(C) 150

(D) 300

10. ಪಂಚಾಯತ್ ರಾಜ್ ವ್ಯವಸ್ಥೆಯ ಬೆನ್ನೆಲುಬು

(A) ಗ್ರಾಮ ಪಂಚಾಯತಿ

(B) ಜಿಲ್ಲಾ ಪಂಚಾಯತಿ

(C) ಗ್ರಾಮಸಭೆ

(D) ತಾಲ್ಲೂಕು ಪಂಚಾಯತಿ

II. 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

$5 \times 1 = 5$

| ***A* ಪಟ್ಟಿ** | ***B* ಪಟ್ಟಿ** |
|---|---|
| (A) ಭೂತಾನ್ | (i) ಡಯಟ್ |
| (B) ಪಾಕಿಸ್ತಾನ | (ii) ತ್ಸೆಂಗ್‌ಡು |
| (C) ಜಪಾನ್ | (iii) ಪಾರ್ಲಿಮೆಂಟ್ |
| (D) ನೇಪಾಳ | (iv) ಕಾಂಗ್ರೆಸ್ |
| (E) ಕೆನಡಾ | (v) ಜಡಿಯಾ ಸನ್‌ಸದ್ |
| | (vi) ನ್ಯಾಷನಲ್ ಅಸೆಂಬ್ಲಿ |
| | (vii) ರಾಷ್ಟ್ರೀಯ ಪಂಚಾಯತ್ |

III. **ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 15 × 1 = 15

12. ನಮ್ಮ ಸಂವಿಧಾನವು ಜಾರಿಗೆ ಬಂದದ್ದು ಯಾವಾಗ ?

13. ಸಾಮಾಜಿಕ ನ್ಯಾಯ ಎಂದರೇನು ?

14. ಭ್ರಾತೃತ್ವವನ್ನು ವ್ಯಾಖ್ಯಾನಿಸಿ.

15. ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಎಂ.ಸಿ. ಛಾಗ್ಲಾರವರ ಅಭಿಪ್ರಾಯವೇನು ?

16. ಉದಾರವಾದಿ ತತ್ವಗಳೆಂದರೇನು ?

17. ಸಮಾಜವಾದಿ ತತ್ವಗಳ ಮುಖ್ಯ ಗುರಿಯೇನು ?

18. ಸರ್ಕಾರದ ವಿಧಗಳನ್ನು ಹೆಸರಿಸಿ.

19. ಯಾವ ರಾಷ್ಟ್ರದ ಉಪಾಧ್ಯಕ್ಷರ ಸ್ಥಾನವು ಭಾರತದ ಉಪರಾಷ್ಟ್ರಪತಿಯವರ ಸ್ಥಾನಕ್ಕೆ ಹೋಲುತ್ತದೆ ?

20. ಭಾರತದ ರಾಷ್ಟ್ರಪತಿಯವರು ರಾಜ್ಯಸಭೆಗೆ ಎಷ್ಟು ಸದಸ್ಯರನ್ನು ನಾಮಕರಣ ಮಾಡುತ್ತಾರೆ ?

21. ಅಧಿವೇಶನದ ಅವಧಿಯಲ್ಲಿ ಗಮನಸೆಳೆಯುವ ಸೂಚನೆ ಏಕೆ ಬೇಕು ?

22. ವಿಧಾನ ಪರಿಷತ್ತು ಹಣಕಾಸು ಮಸೂದೆಯನ್ನು ಹೇಗೆ ನಿಯಂತ್ರಿಸುತ್ತದೆ ?

23. ರಾಜ್ಯ ಸರ್ಕಾರವನ್ನು ವಜಾ ಮಾಡುವಂತೆ ರಾಷ್ಟ್ರಪತಿಗಳಿಗೆ ಯಾರು ಶಿಫಾರಸ್ಸು ಮಾಡುತ್ತಾರೆ ?

24. ಲೋಕಸಭೆಯು ನಡೆಸುವ ಯಾವುದಾದರೂ ಎರಡು ಅಧಿವೇಶನಗಳನ್ನು ಹೆಸರಿಸಿ.

25. ಲೋಕ ಅದಾಲತ್‌ನ್ನು ಏಕೆ ಸ್ಥಾಪಿಸಲಾಗಿದೆ ?

26. ಕರ್ನಾಟಕ ರಾಜ್ಯ ಲೋಕಸೇವಾ ಆಯೋಗದ ಕೇಂದ್ರ ಕಛೇರಿ ಎಲ್ಲಿದೆ ?

IV. **ಕೆಳಗಿನ ಪ್ರಶ್ನೆಗಳಿಗೆ *ಎರಡರಿಂದ ನಾಲ್ಕು* ವಾಕ್ಯಗಳಲ್ಲಿ ಉತ್ತರಿಸಿ :** 24 × 2 = 48

27. 1919 ರಲ್ಲಿ ಮಾಂಟೆಗೊ ಮತ್ತು ಚೆಮ್ಸ್ ಫೊರ್ಡ್‌ರು ಜಾರಿಗೆ ತಂದ ಸುಧಾರಣೆಗಳೇನು ?

28. ಭಾರತವನ್ನು ಒಂದು ಜಾತ್ಯಾತೀತ ರಾಷ್ಟ್ರವೆಂದು ಏಕೆ ಕರೆಯುತ್ತಾರೆ ?

29. ಯಾವುದಾದರೂ ನಾಲ್ಕು ಮೂಲಭೂತ ಹಕ್ಕುಗಳನ್ನು ತಿಳಿಸಿ.

30. ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ ಸಾಧಿಸಲು ಕೈಗೊಂಡಿರುವ ಕ್ರಮಗಳೇನು ?

31. ರಾಜ್ಯಸಭೆಯ ಸದಸ್ಯರಾಗಲು ಬೇಕಾಗಿರುವ ಅರ್ಹತೆಗಳೇನು ?

32. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕ ಮತ್ತು ಅಧಿಕಾರಾವಧಿಯನ್ನು ವಿವರಿಸಿ.

33. ಸರ್ವೋಚ್ಚ ನ್ಯಾಯಾಲಯವು ಸಂವಿಧಾನವನ್ನು ಹೇಗೆ ರಕ್ಷಿಸುತ್ತದೆ ?

34. ಒಂದು ರಾಜ್ಯದ ರಾಜ್ಯಪಾಲರಾಗಲು ಬೇಕಾಗಿರುವ ಅರ್ಹತೆಗಳೇನು ?

35. ರಾಜ್ಯಪಾಲರ ಕಾರ್ಯಾಂಗೀಯ ಅಧಿಕಾರಗಳನ್ನು ತಿಳಿಸಿ.

36. ವಿಧಾನ ಸಭೆಯ ಚುನಾವಣಾ ಅಧಿಕಾರಗಳನ್ನು ಪಟ್ಟಿ ಮಾಡಿ.

37. ಉಚ್ಚ ನ್ಯಾಯಾಲಯವು ಅಧೀನ ನ್ಯಾಯಾಲಯಗಳನ್ನು ಹೇಗೆ ನಿಯಂತ್ರಿಸುತ್ತದೆ ?

38. ಉಚ್ಚ ನ್ಯಾಯಾಲಯದ ನ್ಯಾಯಿಕ ವಿಮರ್ಶೆ ಅಧಿಕಾರಗಳನ್ನು ತಿಳಿಸಿ.

39. ದಂಡು ಪ್ರದೇಶಗಳ ಆಡಳಿತವನ್ನು ಹೇಗೆ ನಿರ್ವಹಿಸಲಾಗುತ್ತಿತ್ತು ?

40. ರಾಜ್ಯ ಲೋಕಸೇವಾ ಆಯೋಗದ ಕಾರ್ಯಗಳೇನು ?

41. ನಮ್ಯ ಮತ್ತು ಅನಮ್ಯ ಸಂವಿಧಾನಗಳಿಗಿರುವ ವ್ಯತ್ಯಾಸವೇನು ?

42. ಭಾರತದ ಸಂವಿಧಾನದ ಪ್ರಸ್ತಾವನೆಯಲ್ಲಿ ಯಾವ ಸ್ವಾತಂತ್ರ್ಯಗಳಿಗೆ ಅವಕಾಶ ಕಲ್ಪಿಸಲಾಗಿದೆ ?

43. ಸರ್ವೋಚ್ಚ ನ್ಯಾಯಾಲಯವು ಹೊರಡಿಸುವ ಆಜ್ಞೆಗಳನ್ನು ಹೆಸರಿಸಿ.

44. ಗಾಂಧಿವಾದದ ತತ್ವಗಳಾವುವು ?

45. ಭಾರತದ ರಾಷ್ಟ್ರಪತಿಯವರ ಹಣಕಾಸಿನ ಕಾರ್ಯಗಳೇನು ?

46. ಭಾರತದ ರಾಷ್ಟ್ರಪತಿಯವರನ್ನು ಹೇಗೆ ಆಯ್ಕೆ ಮಾಡಲಾಗುತ್ತದೆ ?

47. ಯಾವ ವಿಷಯಗಳ ಮೇಲೆ ಸಾರ್ವಜನಿಕ ಹಿತಾಸಕಿ ಮೊಕದ್ದಮೆ ದಾಖಲು ಮಾಡಬಹುದು ?

48. ರಾಜ್ಯ ಮಂತ್ರಿ ಮಂಡಲವನ್ನು ಹೇಗೆ ನೇಮಕ ಮಾಡಲಾಗುತ್ತದೆ ?

49. ವಿಧಾನ ಪರಿಷತ್ ವಿಧಾನಸಭೆಯ ಕಾರ್ಯ ಒತ್ತಡವನ್ನು ಹೇಗೆ ಕಡಿಮೆ ಮಾಡುತ್ತದೆ ?

50. ಕೇಂದ್ರ ಲೋಕಸೇವಾ ಆಯೋಗದ ಸದಸ್ಯರಾಗಲು ಬೇಕಾಗಿರುವ ಅರ್ಹತೆಗಳೇನು ?

V. **ಕೆಳಗಿನ ಪ್ರಶ್ನೆಗಳಿಗೆ *ಮೂರರಿಂದ* ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

51. ನಮ್ಮ ಸಂವಿಧಾನದ ಬೆಳವಣಿಗೆಗೆ ಕೊಡುಗೆ ನೀಡಿದ ಶಾಸನಗಳಾವುವು ?

52. ಮಾಹಿತಿ ಹಕ್ಕು ಕಾಯ್ದೆಯ ಪ್ರಾಮುಖ್ಯತೆಯನ್ನು ವಿವರಿಸಿ.

53. ಮೂಲಭೂತ ಹಕ್ಕುಗಳು ರಾಜ್ಯನೀತಿ ನಿರ್ದೇಶಕ ತತ್ವಗಳಿಗಿಂತ ಹೇಗೆ ವಿಭಿನ್ನವಾಗಿವೆ ?

54. ಪ್ರಧಾನ ಮಂತ್ರಿಯವರ ಅಧಿಕಾರ ಮತ್ತು ಕಾರ್ಯಗಳೇನು ?

55. ಸರ್ವೋಚ್ಚ ನ್ಯಾಯಾಲಯದ ಮೂಲ ಅಧಿಕಾರ ವ್ಯಾಪ್ತಿ ಮತ್ತು ಅಪೀಲು ಅಧಿಕಾರಗಳ ವ್ಯಾಪ್ತಿಯನ್ನು ವಿವರಿಸಿ.

56. ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.

VI. **ಕೆಳಗಿನ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** $1 \times 4 = 4$

57. ಪ್ರತಿ ಗ್ರಾಮಕ್ಕೂ ಗ್ರಾಮ ಪಂಚಾಯತಿ ಅವಶ್ಯಕ. ವಿವರಿಸಿ.